ಕರ್ನಾಟಕ ಸರ್ಕಾರ

# ಕಾಲೇಜು ಶಿಕ್ಷಣ ಇಲಾಖೆ

ದೂರವಾಣಿ: 080-22343904/05 ಕಾಲೇಜು ಶಿಕ್ಷಣ ಆಯುಕ್ತರ ಕಛೇರಿ,
ಬೆಂಗಳೂರು-560001.

ಸಂಖ್ಯೆ:ಕಾಶಿಇ/ಶೈವಿ/40/ಆನ್‌ಲೈನ್ ಪ್ರವೇಶಾತಿ/2019-20 ದಿನಾಂಕ:20.05.2019.

## ಸುತ್ತೋಲೆ

**ವಿಷಯ:** ಇಲಾಖಾ ವ್ಯಾಪ್ತಿಯ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಲ್ಲಿ 2019-20ನೇ ಸಾಲಿನಲ್ಲಿ ಪ್ರಥಮ ಪದವಿ ತರಗತಿಗೆ ಮ್ಯಾನ್ಯುಯೆಲ್ ವಿಧಾನದಲ್ಲಿ ಪ್ರವೇಶಾತಿಯನ್ನು ನಡೆಸುವುದರೊಂದಿಗೆ ಆನ್‌ಲೈನ್ ಪ್ರವೇಶಾತಿ ಪದ್ಧತಿಯನ್ನೂ ಜಾರಿಗೊಳಿಸಲು ಮಾರ್ಗಸೂಚಿಗಳು

**ಉಲ್ಲೇಖ:** 1) ಕಾಶಿಇ/ಶೈವಿ/31/ಆನ್ ಲೈನ್ ಪ್ರವೇಶ/2015-16, ದಿನಾಂಕ: 20-05-2015, ಮತ್ತು ದಿನಾಂಕ:18-05-2015.
2) ಕಾಶಿಇ/ಶೈವಿ/21/ಆನ್ ಲೈನ್ ಪ್ರವೇಶಾತಿ/2016-17, ದಿನಾಂಕ: 12-07-2016.

>>><<<

2019-20ನೇ ಶೈಕ್ಷಣಿಕ ವರ್ಷದಿಂದ ಇಲಾಖಾ ವ್ಯಾಪ್ತಿಯ ಎಲ್ಲಾ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಲ್ಲಿ ವಿದ್ಯಾರ್ಥಿಗಳ ಹಿತದೃಷ್ಟಿಯಿಂದ ಪ್ರಥಮ ಪದವಿ ತರಗತಿಗೆ ಪ್ರವೇಶಾತಿ ಪ್ರಕ್ರಿಯೆಯನ್ನು ಹಿಂದಿನ ವರ್ಷಗಳಂತೆ ಮ್ಯಾನ್ಯುಯೆಲ್ ಪದ್ಧತಿಯಲ್ಲಿ ನಡೆಸುವುದರೊಂದಿಗೆ ಆನ್‌ಲೈನ್‌ನಲ್ಲೂ ನಡೆಸಲು ಉದ್ದೇಶಿಸಲಾಗಿದೆ. ಈ ಸಂಬಂಧವಾಗಿ ಕೆಳಗೆ ನಮೂದಿಸಲಾಗಿರುವ ಮಾರ್ಗಸೂಚಿಗಳನ್ನು ಅನುಸರಿಸಿ, ಅರ್ಹ ವಿದ್ಯಾರ್ಥಿಗಳಿಗೆ ಪ್ರಥಮ ಪದವಿ ತರಗತಿಗಳಿಗೆ ಪ್ರವೇಶಾತಿ ನೀಡಲು ಸೂಚಿಸಲಾಗಿದೆ:

1. 2019-20ನೇ ಸಾಲಿನಲ್ಲಿ ಪ್ರಥಮ ಪದವಿ ತರಗತಿಗೆ ಪ್ರವೇಶಾತಿಗಾಗಿ ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಲು ಅವಕಾಶ ಕಲ್ಪಿಸಿದ್ದರೂ, ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಲು ಬಯಸದ/ಸಾಧ್ಯವಿಲ್ಲದ/ಅನುಕೂಲವಿಲ್ಲದ ವಿದ್ಯಾರ್ಥಿಗಳು ಪ್ರವೇಶಾತಿ ಅವಕಾಶದಿಂದ ವಂಚಿತರಾಬಾರದು ಎನ್ನುವ ದೃಷ್ಟಿಯಿಂದ, **ಪ್ರಥಮ ಪದವಿ ತರಗತಿಗೆ ಆನ್‌ಲೈನ್ ಪ್ರವೇಶಾತಿ ಅರ್ಜಿಗಳ ಜೊತೆಗೆ, ಹಿಂದಿನಂತೆ ಮ್ಯಾನ್ಯುಯಲ್ ಆಗಿಯೂ ಪ್ರವೇಶಾತಿ ಅರ್ಜಿಗಳನ್ನು ಸ್ವೀಕರಿಸತಕ್ಕದ್ದು.**

2. ಆನ್‌ಲೈನ್ ಪ್ರವೇಶಾತಿ ಪ್ರಕ್ರಿಯೆ ಯಶಸ್ವಿಯಾಗಿ ಅನುಷ್ಠಾನಗೊಳ್ಳುವಂತೆ ಸಂಬಂಧಪಟ್ಟ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳ ಪ್ರಾಂಶುಪಾಲರು ಹಾಗೂ 'ಪ್ರಥಮ ಪದವಿ ತರಗತಿಯ ಪ್ರವೇಶಾತಿ ಸಮಿತಿ' ವಿದ್ಯಾರ್ಥಿಗಳಿಗೆ ಎಲ್ಲಾ ನೆರವನ್ನೂ ನೀಡತಕ್ಕದ್ದು.

3. ಪ್ರಥಮ ಪದವಿ ತರಗತಿಗೆ ಪ್ರವೇಶಾತಿಗಾಗಿ ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಲು ಸಹಾಯ ಬಯಸುವ ವಿದ್ಯಾರ್ಥಿಗಳಿಗಾಗಿ ಎಲ್ಲಾ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಲ್ಲೂ ಗಣಕಯಂತ್ರ, ಇಂಟರ್‌ನೆಟ್ ಮತ್ತು ಗಣಕಯಂತ್ರದ ಬಳಕೆಯಲ್ಲಿ ಪರಿಣತಿಯುಳ್ಳ ಅಧ್ಯಾಪಕರೊಡನೆ ಕೂಡಿದ Online Help Desk ಅನ್ನು ವ್ಯವಸ್ಥೆಗೊಳಿಸತಕ್ಕದ್ದು.

4. ಪ್ರಥಮ ಪದವಿ ತರಗತಿಗೆ ಪ್ರವೇಶ ಬಯಸುವ ವಿದ್ಯಾರ್ಥಿಗಳು ಇಲಾಖೆಯ ವೆಬ್‌ಸೈಟ್ www.dce.kar.nic.in ನ **Online Admission Portal** ನಲ್ಲಿ ಒದಗಿಸಲಾಗುವ ಅರ್ಜಿಗಳನ್ನು ಭರ್ತಿ ಮಾಡಿ ಅಪ್‌ಲೋಡ್ ಮಾಡತಕ್ಕದ್ದು.

5. ಪ್ರಥಮ ಪದವಿ ತರಗತಿಗೆ ಪ್ರವೇಶ ಬಯಸುವ ಒಬ್ಬ ವಿದ್ಯಾರ್ಥಿ, 05 ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಿಗೆ ಮತ್ತು ಪ್ರತಿ ಕಾಲೇಜಿನಲ್ಲಿ 03 ಕೋರ್ಸ್‌ಗಳಿಗೆ/03 ವಿಷಯ ಸಂಯೋಜನೆಗಳಿಗೆ ಆನ್‌ಲೈನ್‌ನಲ್ಲಿ ಒಂದು ಅರ್ಜಿ ಸಲ್ಲಿಸಬಹುದಾಗಿದೆ.

6. ಪ್ರಥಮ ಪದವಿ ತರಗತಿಗೆ ಪ್ರವೇಶ ಬಯಸುವ ಒಬ್ಬ ವಿದ್ಯಾರ್ಥಿ ಮ್ಯಾನ್ಯುಯಲ್ ಅಥವಾ ಆನ್‌ಲೈನ್ ಇವುಗಳಲ್ಲಿ ಯಾವುದಾದರೂ ಒಂದು ವಿಧಾನವನ್ನು ಅನುಸರಿಸಿ ಅರ್ಜಿಯನ್ನು ಸಲ್ಲಿಸಬಹುದಾಗಿದೆ.

7. ಪ್ರಥಮ ಪದವಿ ತರಗತಿಗೆ ಮ್ಯಾನ್ಯುಯಲ್ ಅಥವಾ ಆನ್‌ಲೈನ್ ಪದ್ಧತಿಯಲ್ಲಿ ಸ್ವೀಕೃತವಾದ ಅರ್ಜಿಗಳನ್ನು ಆಯಾ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಲ್ಲಿ ಪರಿಶೀಲಿಸಿ, ಕ್ರೋಢೀಕರಿಸಿ ಸರ್ಕಾರದ ಚಾಲ್ತಿಯಲ್ಲಿರುವ ನಿಯಮಾನುಸಾರ ಪ್ರವೇಶಾತಿ ನೀಡತಕ್ಕದ್ದು.

8. ಮ್ಯಾನ್ಯುಯಲ್ ಆಗಿ ಅರ್ಜಿ ಸಲ್ಲಿಸಿ ಪ್ರವೇಶಾತಿ ಪಡೆದ ವಿದ್ಯಾರ್ಥಿಗಳ ಎಲ್ಲಾ ವಿವರಗಳನ್ನು ಸಂಬಂಧಪಟ್ಟ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಸಿಬ್ಬಂದಿ ಕಡ್ಡಾಯವಾಗಿ ಆನ್‌ಲೈನ್ ತಂತ್ರಾಂಶ ಬಳಸಿ ಅಪ್‌ಲೋಡ್ ಮಾಡತಕ್ಕದ್ದು.

9. ದ್ವಿತೀಯ ಮತ್ತು ತೃತೀಯ ಪದವಿ ತರಗತಿಗಳಿಗೆ ಈ ಹಿಂದಿನ ಸಾಲುಗಳಲ್ಲಿ ಚಾಲ್ತಿಯಲ್ಲಿದ್ದಂತೆ ಮ್ಯಾನ್ಯುಯಲ್ ಪದ್ಧತಿಯಲ್ಲಿಯೇ ಪ್ರವೇಶಾತಿ ಪ್ರಕ್ರಿಯೆ ನಡೆಸತಕ್ಕದ್ದು.

ಮೇಲಿನ ಮಾರ್ಗಸೂಚಿಗಳನ್ನು ಅನುಸರಿಸಿ ಪ್ರಥಮ ಪದವಿ ತರಗತಿಗೆ ಪ್ರವೇಶಾತಿ ಪ್ರಕ್ರಿಯೆಯನ್ನು ಸುಗಮವಾಗಿ ನಡೆಸುವುದರೊಂದಿಗೆ, ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಲ್ಲಿ ಪ್ರವೇಶ ಬಯಸುವ ಯಾವುದೇ ವಿದ್ಯಾರ್ಥಿಯೂ ಪ್ರವೇಶದಿಂದ ವಂಚಿತರಾಗದಂತೆ ಕ್ರಮವಹಿಸತಕ್ಕದ್ದು.

**(ಮಾನ್ಯ ಆಯುಕ್ತರ ಆದೇಶದ ಮೇರೆಗೆ)**

ಕಾಲೇಜು ಶಿಕ್ಷಣ ನಿರ್ದೇಶಕರು

**ಇವರಿಗೆ,**

1) ಜಂಟಿ ನಿರ್ದೇಶಕರು, ಕಾಲೇಜು ಶಿಕ್ಷಣ ಇಲಾಖೆ, ಪ್ರಾದೇಶಿಕ ಕಛೇರಿ, ಬೆಂಗಳೂರು, ಮೈಸೂರು, ಶಿವಮೊಗ್ಗ, ಮಂಗಳೂರು, ಧಾರವಾಡ ಮತ್ತು ಕಲಬುರಗಿ - ಮಾಹಿತಿ ಹಾಗೂ ಸೂಕ್ತ ಕ್ರಮಕ್ಕಾಗಿ.
2) ಇಲಾಖಾ ವ್ಯಾಪ್ತಿಯ ಎಲ್ಲಾ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳ ಪ್ರಾಂಶುಪಾಲರುಗಳಿಗೆ - ಕೂಡಲೇ ಅಗತ್ಯ ಕ್ರಮಕ್ಕಾಗಿ.

**ಪ್ರತಿಯನ್ನು:**

1. ಆಯುಕ್ತರ, ನಿರ್ದೇಶಕರ, ಹೆಚ್ಚುವರಿ ನಿರ್ದೇಶಕರ, ಮುಖ್ಯ ಆಡಳಿತಾಧಿಕಾರಿಗಳ, ಜಂಟಿ ನಿರ್ದೇಶಕರ ಆಪ್ತ ಶಾಖೆ, ಕಾಲೇಜು ಶಿಕ್ಷಣ ಆಯುಕ್ತರ ಕಛೇರಿ, ಬೆಂಗಳೂರು.
2. ಮಾಹಿತಿ ತಂತ್ರಜ್ಞಾನಾಧಿಕಾರಿಗಳು - ಮಾಹಿತಿ ಹಾಗೂ ಸೂಕ್ತ ಕ್ರಮಕ್ಕಾಗಿ.
3. ಕಛೇರಿ ಪ್ರತಿ